# ವಾರಾಣಸೀ ಪುರಪತಿಂ ಭಜ ವಿಶ್ವನಾಥಂ..



ಹಿಂದೂಗಳ ಅತ್ಯಂತ ಪವಿತ್ರ ತೀರ್ಥಕ್ಷೇತ್ರದ ವಿಹಂಗಮ ನೋಟವನ್ನು ನೀಡಿರುವ ಲೇಖಕಿ ವಾರಾಣಸಿಯ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪಿ. ಉಷಾ

ವಿಶ್ವೇಶಂ ಮಾಧವಂ ಢುಂಡಿಂ
ದಂಡಪಾಣಿಂ ಚ ಭೈರವಮ್ ।
ವಂದೇ ಕಾಶೀಂ ಗುಹಾಂ ಗಂಗಾಂ
ಭವಾನೀಂ ಮಣಿಕರ್ಣಿಕಾಮ್ ॥


ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಯವರು ಹಾಡಿರುವ ಕಾಶೀ ಸುಪ್ರಭಾತದ ಈ ಧ್ವನಿಸುರುಳಿಯನ್ನು ಪ್ರತಿದಿನವೂ ಪ್ರಾತಃಕಾಲದಲ್ಲಿ ವಾರಾಣಸಿಯ ರಾಮಕೃಷ್ಣ ಸೇವಾಶ್ರಮದಲ್ಲಿ ಕೇಳುವಾಗಲೆಲ್ಲ, ಪರಮ ಪಾವನ ಉತ್ತರ ವಾಹಿನಿ ಗಂಗೆಯಲ್ಲಿ ಮೀಯುತ್ತ, ಅಧ್ಯಾತ್ಮ ತರಂಗಗಳಿಂದ ಸುತ್ತುವರೆಯಲ್ಪಟ್ಟು, ಇಲ್ಲಿನ ಸಕಲ ದೇವದೇವಿಯರ ಪವಿತ್ರ ದರ್ಶನವನ್ನು ಮಾಡುತ್ತಿರುವಂತೆ ಭಾಸವಾಗುತ್ತದೆ.

ಹೆಜ್ಜೆಹೆಜ್ಜೆಗೂ ದೇವಸ್ಥಾನ ಆಶ್ರಮಗಳಿರುವ **ವಾರಾಣಸಿ**ಯೆಂಬ ಈ ಶ್ರೀಧಾಮವು ಹಿಂದೂಗಳ ಏಳು ಪ್ರಮುಖ ತೀರ್ಥಕ್ಷೇತ್ರಗಳಲ್ಲಿ ಒಂದಾಗಿದ್ದರೂ ಇದರ ಮಹಿಮೆ ಅವೆಲ್ಲಕ್ಕೂ ಹಿರಿದಾದುದು. ಕಾಶಿಯು ಸ್ವರ್ಣಮಯವಾಗಿ ಪ್ರಕಾಶಿಸುತ್ತಿದ್ದುದು ತೀರ್ಥಯಾತ್ರೆಗೆಂದು ಇಲ್ಲಿಗೆ ಬಂದಿದ್ದ ಶ್ರೀರಾಮಕೃಷ್ಣ ಪರಮಹಂಸರ ಅನುಭವಕ್ಕೂ ಬಂದಿತ್ತು. 'ವರಣಾ' ಹಾಗೂ 'ಅಸಿ' ನದಿಗಳ ನಡುವಣ ಈ ಪ್ರದೇಶವನ್ನು 'ವಾರಾಣಸಿ' ಎಂದೂ ಕರೆಯುತ್ತಾರೆ. ಈ ಪದದ ಅರ್ಥವನ್ನು ಹೀಗೂ ಮಾಡಬಹುದು: 'ವಾರಯತಿ' ಅಂದರೆ ನಾಶಮಾಡುವುದು ಎಂಬ ಸಂಸ್ಕೃತ ಪದದಿಂದ ಉತ್ಪತ್ತಿಯಾದ 'ವಾರಾಣಸಿ' ಎಂಬ ಹೆಸರಿನ ಈ ನಗರವು ಮಾನವನ ಪಾಪಗಳನ್ನು ತೊಡೆದುಹಾಕುವ ಪಾಪವಿಮೋಚನಾ ಕ್ಷೇತ್ರ. ಇದು ಭ್ರೂಮಧ್ಯದಲ್ಲಿರುವ ಜ್ಞಾನಚಕ್ರದ ಸೂಚಿಯೂ ಕೂಡ. ವಿಶ್ವದ ಅತಿ ಪುರಾತನ ಜೀವಂತ ನಗರಿಯಾದ ವಾರಾಣಸಿಯು ಮಹಾಭಾರತ, ಪುರಾಣಕಾಲಗಳಿಂದಲೂ ಪವಿತ್ರ ತೀರ್ಥಕ್ಷೇತ್ರವಾಗಿದ್ದು, ಋಷಿಮುನಿಗಳ, ಸಾಧುಸಂತರ ಬೀಡಾಗಿದೆ. ಇಲ್ಲಿನ ಪ್ರತಿಯೊಂದು ಕಲ್ಲುಹರಳೂ ಶಿವಶಂಕರನೆಂಬ ಪ್ರತೀತಿಯಿದೆ. ಮೋಕ್ಷದಾಯಿನಿ ಕಾಶಿಯನ್ನು ಶಿವನು ದೇವಿ ಪಾರ್ವತಿಯನ್ನು ಪ್ರೀತಿಸುವಷ್ಟೆ ಪ್ರೀತಿಸುತ್ತಾನಂತೆ; ಪ್ರಳಯಕಾಲದಲ್ಲೂ ಇದನ್ನು ತೊರೆಯಲಾರನಂತೆ. ಅದಕ್ಕೆಂದೇ ಇದಕ್ಕೆ 'ಅವಿಮುಕ್ತಪುರಿ' ಎಂದು ಹೆಸರು. ಇದು ಆನಂದವನವೂ ಹೌದು; ಮಹಾಶ್ಮಶಾನವೂ ಹೌದು. ಸನಾತನ ಧರ್ಮದ ಎಲ್ಲಾ ಪಂಗಡಗಳ ದೇವಾಲಯಗಳೂ ಇಲ್ಲಿವೆ. ಹೀಗಾಗಿ ಇದೊಂದು ಸಂಕ್ಷಿಪ್ತ ಭಾರತವೇ ಆಗಿಬಿಟ್ಟಿದೆ. ಒಟ್ಟಿನಲ್ಲಿ ಹೇಳುವುದಾದರೆ ಕಾಶಿಯಂಥ ಪುಣ್ಯಧಾಮವು ಬೇರೊಂದಿಲ್ಲ.

ಈ ಕ್ಷೇತ್ರದ ಅಧಿದೇವ–ದೇವಿಯರಾದ ಶ್ರೀವಿಶ್ವನಾಥ ಹಾಗೂ ಮಾತಾ ಅನ್ನಪೂರ್ಣೆಯರ ದರ್ಶನವನ್ನು ಆಗಾಗ ಪಡೆಯುತ್ತಿದ್ದರೂ ಮತ್ತೊಮ್ಮೆ ಅವರ ದರ್ಶನ ಪಡೆಯಬೇಕು, ಹಾಗೆಯೇ ಇತರ ಪ್ರಮುಖ ದೇವಾಲಯಗಳ ದರ್ಶನವನ್ನೂ ಮಾಡಬೇಕೆಂಬ ಆಸೆ ನನಗೆ ಉಂಟಾಯಿತು. ಈ ಸುಸಂದರ್ಭವು ಇದೇ ಶ್ರಾವಣ ಮಾಸದಲ್ಲಿ ಹೈದರಾಬಾದಿನಿಂದ ಬಂದ ಭಕ್ತರೊಬ್ಬರು ನಮ್ಮ ಸೇವಾಶ್ರಮದ ಅತಿಥಿಗೃಹದಲ್ಲಿ ತಂಗಿದ್ದಾಗ ಒದಗಿಬಂದಿತು. ಅವರಿಗೆ ಇಲ್ಲಿನ ದೇವಾಲಯಗಳ ದರ್ಶನವನ್ನು ಮಾಡಿಸಲು ನನಗೆ ಹೇಳಿದಾಗ, ಸಂತೋಷದಿಂದ ಈ ಕಾರ್ಯವನ್ನು ಒಪ್ಪಿಕೊಂಡೆ. ಅಂತೆಯೆ ಆಶ್ರಮಕ್ಕೆ ಸುಪರಿಚಿತರೂ

ಕಾಶೀಕ್ಷೇತ್ರ ಪುರೋಹಿತರೂ ಆದ ಪಂಡಾ ಶ್ರೀ ರಾಮಚಂದ್ರ ಪಾಂಡೆ ಅವರ ಸಲಹೆಯಂತೆ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡೆವು.

ಶ್ರಾವಣ ಸೋಮವಾರ ಮಹಾದೇವ ಶಿವನಿಗೆ ಅತ್ಯಂತ ಪ್ರಿಯವಾದ ದಿನ. ಅಂದು ಮುಂಜಾನೆ ೪.೩೦ ಗಂಟೆಗೇ ಎದ್ದು ಪಕ್ಕದಲ್ಲಿಯೇ ಇರುವ ಶ್ರೀರಾಮಕೃಷ್ಣ ಅದ್ವೈತ ಆಶ್ರಮದಲ್ಲಿ ಶ್ರೀರಾಮಕೃಷ್ಣರ ಬೆಳಗಿನ ಆರತಿಯನ್ನು ನೋಡಿಕೊಂಡು, ಸೈಕಲ್‌ರಿಕ್ಷಾ ಹತ್ತಿ ಗಂಗಾತಟದತ್ತ ಹೊರಟೆವು. ಶ್ರಾವಣ ಮಾಸದ ವಿಶೇಷವೆಂದರೆ, ಕಾವಡಿಗಳನ್ನು ಹೊತ್ತು, 'ಹರ ಹರ ಮಹಾದೇವ,' 'ಜೈ ಭೋಲೇನಾಥ್' ಎಂದು ದಾರಿಯುದ್ದಕ್ಕೂ ದೇವರನ್ನು ಸ್ಮರಿಸುತ್ತ ದೂರದೂರದ ಊರುಗಳಿಂದ ಕಾಶಿಯ ಒಡೆಯ ಶ್ರೀವಿಶ್ವನಾಥನ ದರ್ಶನಕ್ಕೆ ಬರುತ್ತಿರುವ ಅಸಂಖ್ಯ ಸಂಖ್ಯೆಯ ಕಾವಾಡಿಗರ ಗುಂಪು. ಇದನ್ನು ಕಂಡಾಗ ಎಂಥ ನಾಸ್ತಿಕನೂ ಮುಗ್ಧನಾಗುತ್ತಾನೆ. ಗಂಗೆಯ ದಶಾಶ್ವಮೇಧ ಘಾಟಿನಲ್ಲಿಳಿದು, ಪವಿತ್ರ ಜಲದಲ್ಲಿ ಸ್ನಾನ ಮಾಡಿ ಶ್ರೀವಿಶ್ವನಾಥ ಮಂದಿರದತ್ತ ಹೋದೆವು. ಚಿಕ್ಕ ಗಲ್ಲಿಯಲ್ಲಿ ನಡೆದು, ಕಾಶಿಯ ಜನಪ್ರಿಯ ಗಣಪತಿ ಢುಂಡಿರಾಜನಿಗೆ ನಮಸ್ಕರಿಸಿ, ಸರತಿಯ ಸಾಲಿನಲ್ಲಿ ಕೈಮುಗಿದು ನಿಂತೆವು. ಬೆಳಗ್ಗೆ ಸಾಲು ಇನ್ನೂ ಬೆಳೆದಿರಲಿಲ್ಲ. ಹೀಗಾಗಿ ದೇವರ ದರ್ಶನವಾಗುವುದು ಹೆಚ್ಚು ತಡವಾಗಲಿಲ್ಲ. ನಮ್ಮೊಡನೆ ತಂದಿದ್ದ ಬಿಲ್ವಪತ್ರೆ, ಪುಷ್ಪ, ಗಂಗಾಜಲಗಳಿಂದ ನಾವೇ ಸ್ವತಃ ಶ್ರೀವಿಶ್ವೇಶ್ವರನನ್ನು ಆರಾಧಿಸುವಾಗ ನಮಗುಂಟಾದ ಸಂತೋಷ ಅಷ್ಟಿಷ್ಟಲ್ಲ! ಆ ಕ್ಷಣಕ್ಕೆ ಜೀವನ ಧನ್ಯವೆನಿಸಿತು.



ವಿಶ್ವನಾಥ ದೇಗುಲದ ಗೋಪುರ

ನಮ್ಮೊಡನೆ ಬಂದಿದ್ದ ಪುರೋಹಿತರು ಹೀಗೆ ವಿವರಿಸಿದರು: "ಹನ್ನೆರಡರಿಂದ ಹದಿನೇಳನೆಯ ಶತಮಾನ ದವರೆಗೆ ಈ ದೇವಾಲಯವು ಮತ್ತೆ ಮತ್ತೆ ಮುಸಲ್ಮಾನ ರಾಜರುಗಳಿಂದ ವಿಧ್ವಂಸಗೊಂಡಿತ್ತು. ಆದರೂ ಇಂದಿಗೂ ಕೋಟ್ಯಂತರ ಜನರನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ. ನಮ್ಮೆಲ್ಲರ ಹೃತ್ಕಮಲಗಳಲ್ಲಿ ಶ್ರೀವಿಶ್ವನಾಥನು ಇನ್ನೂ ಬೆಳಗುತ್ತಿದ್ದಾನೆ. ಇದನ್ನು ಭಾವಿಸುವಾಗ ನಿಮಗೆ ಆಶ್ಚರ್ಯವಾಗದೆ? ಈಗಿರುವ ಶಿವಾಲಯವನ್ನು ಇಂದೋರಿನ ಅಹಲ್ಯಾಬಾಯಿ ಹೋಳ್ಕರ್ ೧೮ ನೇ ಶತಮಾನದಲ್ಲಿ ಪುನರ್ನಿರ್ಮಾಣ ಮಾಡಿ ಧನ್ಯಳಾದಳು. ಶ್ರೀವಿಶ್ವನಾಥ ಒಂದು ಸ್ವಯಂಭೂ ಲಿಂಗ. ಇದಕ್ಕೆ ಸ್ಪರ್ಶಾಸ್ಪರ್ಶ ದೋಷವಿಲ್ಲ. ಶ್ರೀವಿಶ್ವನಾಥನೇ ಮಹಾದೇವ ವಿಶ್ವೇಶನು. ಅವನೇ ಪ್ರಳಯಕಾಲದಲ್ಲಿ ರುದ್ರನೂ, ವಿಶ್ವವನ್ನೆ ಮೀರಿನಿಂತ ಪರಬ್ರಹ್ಮನೂ ಸಹ! ಈ ವಿಶ್ವನಾಥನ ದರ್ಶನದಿಂದ ಸಕಲ ದೇವತೆಗಳ ದರ್ಶನದ ಫಲ ದೊರಕುವುದು: **ತಸ್ಯ ದರ್ಶನ ಮಾತ್ರೇಣ ತತ್ತ್ವಜ್ಞಾನವಿಧಾಯಕಂ, ಪಾಪಂ ಕ್ಷಯಮವಾಪ್ನೋತಿ ಸರ್ವಥಾ ನಾತ್ರ ಸಂಶಯಃ** - "ಇವನ ದರ್ಶನದಿಂದ ಮನದಲ್ಲಿ ತತ್ತ್ವ ಜ್ಞಾನವು ಮೂಡುವುದು, ಪಾಪಗಳೆಲ್ಲವೂ ನಾಶವಾಗುವವು. ಇದರಲ್ಲಿ ಸಂಶಯವಿಲ್ಲ." ಹೀಗೆ ವಿವರಿಸುತ್ತ ದೇವಸ್ಥಾನದ ಪ್ರಾಂಗಣದಲ್ಲಿನ ಇತರ ಶಿವಲಿಂಗಗಳಿಗೂ, ದೇವದೇವಿಯರ ಮೂರ್ತಿಗಳಿಗೂ ನಮಸ್ಕರಿಸಲು ಹೇಳಿದರು. ಹೊರಗೆ ಬರುತ್ತಲೇ ದೇವಾಲಯದ ಸ್ವರ್ಣಖಚಿತ ಗೋಪುರ ಧ್ವಜಗಳನ್ನು ನೋಡಿ ದೂರದಿಂದಲೇ ಅವುಗಳಿಗೆ ನಮಸ್ಕರಿಸಿದೆವು. "ಇನ್ನು ಅನ್ನಪೂರ್ಣೆ ಭವಾನಿಯ ದರ್ಶನ ಮಾಡೋಣ, ಸಾಯಂಕಾಲ ಶ್ರೀವಿಶ್ವನಾಥನ ಶೃಂಗಾರದಾರತಿಗೆ ಮತ್ತೆ ಬರೋಣ" ಎಂದುಕೊಂಡು ಮುಂದೆ ಹೆಜ್ಜೆ ಹಾಕಿದೆವು. ನಮ್ಮ ಪುರೋಹಿತರು, "ಕಾಶಿಯಂಥ ಮನೆಯಿಲ್ಲ; ವಿಶ್ವನಾಥನಂಥ ತಂದೆಯೂ ಭವಾನಿಯಂಥ ತಾಯಿಯೂ ದುರ್ಲಭ. ಅನ್ನಪೂರ್ಣೆಯು ತ್ರಿಲೋಕಗಳಿಗೂ ಮಾತೆ, ಸಕಲ ಜೀವಿಗಳಿಗೂ ಪ್ರಾಣವನ್ನು ನೀಡುವ ಅನ್ನದಾತೆ ಎನ್ನುತ್ತ, **ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ** – "ಕೆಟ್ಟ ಮಗನು ಹುಟ್ಟಬಹುದು, ಆದರೆ ಕೆಟ್ಟ ತಾಯಿ ಎಂದಿಗೂ ಹುಟ್ಟುವುದಿಲ್ಲ" ಎಂಬ ಶ್ರೀಶಂಕರಾಚಾರ್ಯರು ರಚಿಸಿರುವ ಶ್ಲೋಕದ ಪಂಕ್ತಿಯನ್ನು ಹಾಡಿದರು. ಬನಾರಸೀ ಸೀರೆಯುಡಿಸಿ ಪುಷ್ಪಾಲಂಕಾರ ಮಾಡಿದ್ದ ಅತಿ ಸುಂದರವಾದ ಮಾತೆ ಅನ್ನಪೂರ್ಣೆಯ ಬೆಳ್ಳಿಯ ಮೂರ್ತಿಯನ್ನು ಕಂಡು

ನಾವು ಮುಗ್ಧರಾದೆವು. ಈ ದೇವಾಲಯವು ಶ್ರೀವಿಶ್ವನಾಥ ದೇವಾಲಯಕ್ಕಿಂತಲೂ ವಿಸ್ತಾರವಾಗಿದೆ. ಪ್ರದಕ್ಷಿಣೆಗೂ ಅಗಲ ವಾದ ಜಾಗವಿದೆ. ಆದರೆ ಭಕ್ತರಿಗೆ ಗರ್ಭಗುಡಿಯ ಒಳಗೆ ಪ್ರವೇಶವಿಲ್ಲ. ಗರ್ಭಗುಡಿಯೆದುರು ಇರುವ ಮಂಟಪದಲ್ಲಿ ಕುಳಿತು ಅನ್ನಪೂರ್ಣಾ ಸ್ತೋತ್ರದ ಪಾರಾಯಣ ಮಾಡಿದೆವು. ಇತ್ತ ಕಡೆ ಓರ್ವ ದಂಪತಿಗಳಿಂದ ಪುರೋಹಿತರು ಕುಂಕುಮಾರ್ಚನೆ ಮಾಡಿಸುತ್ತಿದ್ದರು. ಅನ್ನಪೂರ್ಣೆಗೆ ಹೃತ್ಪೂರ್ವಕ ಪ್ರಣಾಮಗಳನ್ನು ಸಲ್ಲಿಸಿದೆವು. ಭಿಕ್ಷಾಪಾತ್ರೆಯನ್ನು ಹಿಡಿದು ನಿಂತ ತ್ಯಾಗೀಶ್ವರ ಶಿವನಿಗೆ ತುಂಬುಪಾತ್ರೆಯಿಂದ ಅನ್ನವನ್ನು ನೀಡುತ್ತಿರುವ ಅನ್ನಪೂರ್ಣೆಯನ್ನು ನೋಡುತ್ತ ನಿಂತಾಗ, "ಕಾಶಿಯಲ್ಲಿ ಯಾರೂ ಹಸಿವೆಯಿಂದ ಸಾಯುವುದಿಲ್ಲ. ಎಲ್ಲರಿಗೂ ಸೂಕ್ತ ಊಟದ ವ್ಯವಸ್ಥೆ ಈ ಕ್ಷೇತ್ರದ ಧರ್ಮಶಾಲೆಗಳಲ್ಲಿದೆ" ಎಂದರು ನಮ್ಮ ಪುರೋಹಿತರಾದ ಶ್ರೀ ರಾಮಚಂದ್ರ ಪಾಂಡೆ. ಪ್ರತಿ ವರ್ಷ ದೀಪಾವಳಿಯಲ್ಲಿ ಈ ಮಾತೃಮಂದಿರದಲ್ಲಿ ಅನ್ನಕೂಟದ ವ್ಯವಸ್ಥೆ ಇರುತ್ತದೆ. ಈ ಸಂದರ್ಭದಲ್ಲಿ ಅನ್ನಪೂರ್ಣಾದೇವಿಯ ಬಂಗಾರದ ಮೂರ್ತಿಯ (ಸ್ವರ್ಣ ಅನ್ನಪೂರ್ಣಾ) ದರ್ಶನವನ್ನು ಮಾಡಬಹುದು. ಈ ಮಂದಿರವು ವಿದ್ಯಾಪೀಠವೂ ಆಗಿದ್ದು, ಹಲವಾರು ರಾಜ್ಯಗಳಿಂದ ವಿದ್ಯಾರ್ಥಿಗಳು ವೇದಾಧ್ಯಯನಕ್ಕಾಗಿ ಇಲ್ಲಿಗೆ ಬರುತ್ತಾರೆ.

ಅನ್ನಪೂರ್ಣೆಯ ದರ್ಶನವಾದ ಮೇಲೆ ಹತ್ತು ನಿಮಿಷಗಳಷ್ಟು ನಡೆದು ಶ್ರೀವಿಶಾಲಾಕ್ಷಿ ಮಂದಿರವನ್ನು ತಲುಪಿದೆವು. ಗಲ್ಲಿ ಅತಿ ಸಣ್ಣದಾಗಿದ್ದು ಸೈಕಲ್‌ರಿಕ್ಷಾಗಳು ಹೋಗಲಾರವಾದ್ದರಿಂದ ನಡೆದೇ ಹೋಗಬೇಕಾಗುವುದು. **ಮಧುರೆ ಮೀನಾಕ್ಷಿ, ಕಂಚಿ ಕಾಮಾಕ್ಷಿ, ಕಾಶಿ ವಿಶಾಲಾಕ್ಷಿ** ಎಂಬ ಮಾತನ್ನು ಚಿಕ್ಕಂದಿನಲ್ಲಿ ಕೇಳುತ್ತಿದ್ದುದರ ನೆನಪಾಯಿತು. ಭಾರತವರ್ಷದಲ್ಲಿ ಹರಡಿರುವ ಶಕ್ತಿಪೀಠಗಳಲ್ಲಿ, ಶ್ರೀಸತೀ ದೇವಿಯ ಕಣ್ಣುಗಳಿಂದ ಪಾವನಗೊಂಡಿರುವ ಸ್ಥಳವಿದು. ೧೯೭೧ ರಲ್ಲಿ ತಮಿಳುನಾಡಿನ ಭಕ್ತರು ಪುನರುತ್ಥಾನಗೊಳಿಸಿದ ಈ ದೇವಾಲಯದಲ್ಲಿ ಹೆಚ್ಚಿನ ಜನಸಂದಣಿಯಿಲ್ಲ. ನೆಮ್ಮದಿಯ ಮನಸ್ಸಿನಿಂದ ವಿಶಾಲನೇತ್ರಿಯೂ ಕರುಣಾಮಯಿಯೂ ಆದ ದೇವಿ ವಿಶಾಲಾಕ್ಷಿಯ ದರ್ಶನವನ್ನು ಪಡೆದು ಅರ್ಧಗಂಟೆಯ ಕಾಲ ನಡೆದೇ ರಾಮಕೃಷ್ಣ ಸೇವಾಶ್ರಮಕ್ಕೆ ಹಿಂದಿರುಗಿದೆವು.

ಮಧ್ಯಾಹ್ನ ವಿಶ್ರಾಂತಿಯ ಬಳಿಕ, ಶ್ರೀವಿಶ್ವೇಶ್ವರನ ಸಂಧ್ಯಾರತಿಯನ್ನು ನೋಡಬೇಕೆಂಬ ತವಕ ಉಂಟಾಯಿತು. ಮತ್ತೆ ಪುರೋಹಿತರ ನೇತೃತ್ವದಲ್ಲಿ ಸುಮಾರು ಆರು ಗಂಟೆಯ ಹೊತ್ತಿಗೆ ಮಂದಿರಕ್ಕೆ ತೆರಳುತ್ತಿದ್ದಂತೆ ರಸ್ತೆಯಲ್ಲಿ ನೆರೆದಿದ್ದ ಜನಸ್ತೋಮವು ನಮ್ಮನ್ನು ದಿಗ್ಭ್ರಮೆಗೊಳಿಸಿತು. ಈ ಹೊತ್ತಿಗಾಗಲೇ ವಾಹನಗಳ ಸಂಚಾರವನ್ನು ನಿಷೇಧಿಸಿದ್ದುದರಿಂದ ನಡೆದೇ ಹೋಗಬೇಕಾಯಿತು. ಬೆಳಗ್ಗೆ ಶಾಂತವಾಗಿದ್ದ ವಿಶ್ವನಾಥ ಗಲ್ಲಿಯು ಈಗ ಭಕ್ತರ 'ಹರ ಹರ ಮಹಾದೇವ' ಧ್ವನಿಯ ಜೊತೆಗೆ ಧ್ವನಿವರ್ಧಕಗಳಿಂದ ಹೊರಹೊಮ್ಮುತ್ತಿದ್ದ, 'ನಮಃ ಶಿವಾಯ ಓಂ ನಮಃ ಶಿವಾಯ' ಹಾಗೂ 'ಮೃತ್ಯುಂಜಯ ಮಂತ್ರ' ಗಳಿಂದ



ಅನ್ನಪೂರ್ಣಾ ದೇವಿಯ ಪ್ರತಿಮೆ

ಪ್ರತಿಧ್ವನಿಸುತ್ತಿತ್ತು. ಸಂತೋಷದ ಸಂಗತಿಯೆಂದರೆ ಇಷ್ಟೊಂದು ಸದ್ದುಗದ್ದಲದ ನಡುವಿನಲ್ಲಿಯೂ ಎಲ್ಲೂ ಯಾವ ಚಲನಚಿತ್ರ ಗೀತೆಯೂ ಕೇಳಿಬರಲಿಲ್ಲ!

ದೇವಸ್ಥಾನವನ್ನು ತಲುಪುತ್ತಲೇ ತಲಾ ೫೦/– ರೂಪಾಯಿಗಳ ಚೀಟಿಯನ್ನು ಪಡೆದ ನಮ್ಮನ್ನು ಆರತಿ ನೋಡುವ ಸಲುವಾಗಿ ಸೂಕ್ತಸ್ಥಳದಲ್ಲಿ ಪುರೋಹಿತರು ಕುಳ್ಳಿರಿಸಿದರು. ಬೆಳ್ಳಿಯ ನಾಗಾಭರಣವನ್ನು ತೊಟ್ಟು ಶ್ರೀಗಂಧ, ಬಿಲ್ವ ಪುಷ್ಪಹಾರಗಳಿಂದ ಅಲಂಕೃತನಾದ ವಿಶ್ವನಾಥನಿಗೆ ಶುಕ್ಲ ಯಜುರ್ವೇದ ಶೈಲಿಯಲ್ಲಿ ರುದ್ರ–ಚಮಕ ಪಠಣ ಹಾಗೂ ಇತರ ಶಿವಸ್ತುತಿಗಳೊಂದಿಗೆ, ಹನ್ನೊಂದು ಮಂದಿ ಪೂಜಾರಿಗಳು ಆರತಿ ನೈವೇದ್ಯಗಳಿಂದ ಪೂಜೆ ಸಲ್ಲಿಸುವುದನ್ನು ನೋಡಿದಾಗ ಆಗುವ ರೋಮಾಂಚನವನ್ನು ವರ್ಣಿಸಲು ಅಸಾಧ್ಯ! ಸುಮಾರು ಒಂದು ಗಂಟೆಗಿಂತಲೂ ಹೆಚ್ಚು ಕಾಲ ನಡೆಯುವ ಈ ಶೃಂಗಾರದಾರತಿಯನ್ನು ವೀಕ್ಷಿಸಿದ ನಾವು ಧನ್ಯರೆಂದೇ ಹೇಳಬೇಕು.

ಮರುದಿನ ಬೆಳಿಗ್ಗೆ ಶ್ರೀಕೇದಾರೇಶ್ವರನ ದರ್ಶನವನ್ನು ಮಾಡಿದೆವು. 'ಕೇದಾರ' ಎಂದರೆ ಮುಕ್ತಿಕ್ಷೇತ್ರ ಎಂದರ್ಥ. ಹಿಮಾಲಯದ ಕೇದಾರನಾಥ ಹಾಗೂ ಇಲ್ಲಿನ ಕೇದಾರೇಶ್ವರ ಎರಡೂ ಒಂದೇ ಎಂದು ಇಲ್ಲಿಗೆ ಬಂದಿದ್ದ ಶ್ರೀಮಾತೆ ಶಾರದಾದೇವಿಯವರಿಗೆ ಗೋಚರವಾಗಿತ್ತು. ಶ್ರೀಕೇದಾರೇಶ್ವರ




ಲಿಂಗವೂ ಸ್ವಯಂಭೂಲಿಂಗವಾಗಿದ್ದು ಅದರ ಮಧ್ಯದಲ್ಲಿರುವ ಬಿಳಿಯ ರೇಖೆಯಿಂದ, ಇಬ್ಭಾಗವಾಗಿರುವಂತೆ ತೋರುತ್ತದೆ. ಇದನ್ನು ಅರ್ಧನಾರೀಶ್ವರನ ರೂಪವೆಂದು ಹೇಳುತ್ತಾರೆ. ಗರ್ಭ ಗುಡಿ ಕತ್ತಲಾಗಿದ್ದರೂ, ಹೊರಗಿನ ಪ್ರಾಂಗಣ ವಿಶಾಲವಾಗಿದ್ದು ಪ್ರಕಾಶಮಾನವಾಗಿದೆ. ಶ್ರೀಕೇದಾರೇಶ್ವರನಿಗೆ ಭಕ್ತಿಯಿಂದ ಬಿಲ್ವಪತ್ರಾದಿಗಳಿಂದ ಪೂಜೆ ಮಾಡಿ ಹೊರಕ್ಕೆ ಬಂದು, ಮಂದಿರದ ಕಡಿದಾದ ಮೆಟ್ಟಿಲುಗಳ ಕೆಳಗೆ ಸ್ವಚ್ಛವಾಗಿ ಹರಿಯುತ್ತಿದ್ದ ಗಂಗೆಗೆ ಅಲ್ಲಿಂದಲೇ ನಮಸ್ಕರಿಸಿ, ಅನಂತರ ಸಮೀಪದ ಸಣ್ಣ ರಸ್ತೆಯಲ್ಲಿರುವ ಒಬ್ಬ ಭಕ್ತರ ಮನೆಗೆ ಹೋದೆವು. ಹೊರಗೆ **ಶ್ರೀರಾಮಕೃಷ್ಣ ಪಾದುಕಾ** ಎಂಬ ತೂಗುಹಲಗೆಯನ್ನು ನೇತು ಹಾಕಲಾಗಿತ್ತು. ಇದರ ಅರ್ಥವನ್ನು ತಿಳಿಯಲು ಕಷ್ಟಪಡಬೇಕಾಗಿರಲಿಲ್ಲ. ಶ್ರೀರಾಮಕೃಷ್ಣರು ಕಾಶಿಗೆ ಬಂದಿದ್ದಾಗ ಉಳಿದುಕೊಂಡು, ತಮ್ಮ ಪಾದಧೂಳಿಯಿಂದ ಪುನೀತಗೊಳಿಸಿದ ಮನೆಯೇ ಇದು. ಶ್ರೀರಾಮಕೃಷ್ಣರು ತಂಗಿದ್ದ ಈ ಕೋಣೆಯಲ್ಲಿ ಅವರ ಚಿತ್ರ ಹಾಗೂ ಅವರು ಉಪಯೋಗಿಸಿದ್ದ ಪಾದರಕ್ಷೆಗಳಿಗೆ ಮನೆಮಂದಿಯೆಲ್ಲ ಸೇರಿ ವಿಧಿವತ್ತಾಗಿ ದಿನವೂ ಪೂಜೆ ಮಾಡುತ್ತಾರೆ. ಚೊಕ್ಕವಾದ ಈ ಪೂಜಾಗೃಹವು ತುಂಬ ಚಿಕ್ಕದೇನಲ್ಲ. ಶ್ರೀರಾಮಕೃಷ್ಣರ ಭಾವಚಿತ್ರದೆದುರು ಕುಳಿತು ಅವರ ಪುಣ್ಯನಾಮವನ್ನು ಜಪಿಸುತ್ತ ಸ್ವಲ್ಪಕಾಲ ಕಳೆದೆವು. ಬಳಿಕ ಪ್ರಸಾದವನ್ನು ಸ್ವೀಕರಿಸಿ ಕಾಶಿಯ ಪ್ರಖ್ಯಾತ ಶ್ರೀದುರ್ಗಾಮಂದಿರದತ್ತ ಸಾಗಿದೆವು.

ದಾರಿಯಲ್ಲಿ 'ಆನಂದವನ' ಎಂಬ ಉದ್ಯಾನದ ಎದುರು ರಿಕ್ಷಾ ನಿಂತಿತು. ಹತ್ತೊಂಬತ್ತನೆಯ ಶತಮಾನದ ಶ್ರೇಷ್ಠ ಸಂತ ಸ್ವಾಮಿ ಭಾಸ್ಕರಾನಂದಜೀಯವರ ಸಮಾಧಿಪೀಠ ಇಲ್ಲಿದೆ. ಕಠೋರ ತಪಸ್ವಿಗಳೂ ಬ್ರಹ್ಮಜ್ಞಾನಿಗಳೂ ಆಗಿದ್ದ ಇವರನ್ನು ಶ್ರೀಮಾತೆ ಶಾರದಾದೇವಿಯವರು ತಮ್ಮ ಇತರ ಭಕ್ತೆಯರೊಂದಿಗೆ ಸಂದರ್ಶಿಸಿ ತಮ್ಮ ಗೌರವವನ್ನು ಸಲ್ಲಿಸಿದ್ದರು. ಪೂಜ್ಯರ ಸಮಾಧಿಪೀಠಕ್ಕೆ ನಮಸ್ಕರಿಸಿ, ಮತ್ತೆ ರಿಕ್ಷಾದಲ್ಲಿ ಕುಳಿತು ಅನತಿದೂರದ ವಿಶಾಲ ಪುಷ್ಕರಿಣಿಯ ಎದುರಿಗಿರುವ ಶ್ರೀದುರ್ಗಾ ಮಂದಿರವನ್ನು ಪ್ರವೇಶಿಸಿದೆವು.

ಕೆಂಪುಗೋಡೆಗಳಿಂದ ಸುತ್ತುವರೆದ ಸುಂದರವಾದ ಮಂದಿರ, ಈ ದುರ್ಗಾ ಮಂದಿರ. ಮಂಗಳವಾರವಾದ್ದರಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಿಯ ದರ್ಶನಕ್ಕಾಗಿ ನೆರೆದಿದ್ದರು. ದೇವಸ್ಥಾನದ ಹೊರಾಂಗಣದಲ್ಲಿ ಶ್ರಾವಣಮೇಳವೂ ನಡೆಯುತ್ತಿತ್ತು. ಮಂಟಪದ ಒಳಗಿನ ಕಂಬಗಳಲ್ಲಿನ ಶಿಲ್ಪಕಲೆ ಆಕರ್ಷಕವಾಗಿದೆ. ಕೆಂಪು ಜರತಾರಿ ಸೀರೆಯನ್ನುಟ್ಟು ಹುಲಿಯ ಮೇಲೆ ಸವಾರಿ ಮಾಡುತ್ತ, ಆಯುಧಪಾಣಿಯಾಗಿರುವ ದೇವಿಯು ಹೂಮಾಲೆಗಳಿಂದ ಅಲಂಕೃತಳಾಗಿ ಕಂಗೊಳಿಸುತ್ತಾಳೆ. ಭಕ್ತಾದಿಗಳು ಈಕೆಗೆ ಕೆಂಪು ದಾಸವಾಳದ ಹಾರ, ಹಣ್ಣು–ತೆಂಗಿನಕಾಯಿ ಹಾಗೂ ಕೆಂಪುವಸ್ತ್ರವನ್ನು (ಚುನರಿ) ನಿವೇದಿಸಿ ಕೃತಾರ್ಥರಾಗುತ್ತಾರೆ.

ದೇವಾಲಯದ ಬಾಗಿಲನ್ನು ದಾಟುತ್ತಲೇ ದೊಡ್ಡ ಮಂಗವೊಂದು ಬಂದು, ನಮ್ಮ ಕೈಲಿದ್ದ ಬಾಳೆಹಣ್ಣನ್ನು ಕಸಿದು ಕೊಳ್ಳಲೆತ್ನಿಸಿದಾಗ ಸ್ವಾಮಿ ವಿವೇಕಾನಂದರ ಪರಿವ್ರಾಜಕ ಜೀವನದ ಘಟನೆಯೊಂದು ನೆನಪಿಗೆ ಬಾರದಿರಲಿಲ್ಲ. ದೇಶಾದ್ಯಂತ ಪ್ರಯಾಣ ಮಾಡುತ್ತ ಸ್ವಾಮೀಜಿಯವರು ವಾರಾಣಸಿಯ ಈ ಮಂದಿರಕ್ಕೆ ಬಂದಿದ್ದಾಗ ಕೋತಿಯೊಂದು ಅವರನ್ನು ಅಟ್ಟಿಸಿಕೊಂಡು ಬಂದಿತ್ತು. ಭಯದಿಂದ ಸ್ವಾಮೀಜಿಯವರು ಓಡತೊಡಗಿದಾಗ ಈ ದೃಶ್ಯವನ್ನು ನೋಡುತ್ತಿದ್ದ ಹಿರಿಯ ಸಾಧುಗಳೊಬ್ಬರು, "ಹೆದರಿಕೆಯಿಂದ ಪಲಾಯನಗೈಯಬೇಡ. ಆ ದುಷ್ಟನನ್ನು ಎದುರಿಸು" ಎಂಬ ಪಾಠವನ್ನು ಕಲಿಸಿದ್ದರು. ಮುಂದೆ ಸ್ವಾಮಿ ವಿವೇಕಾನಂದರು ತಮ್ಮ ಜೀವನದಲ್ಲಿ ಯಾವ ಕಷ್ಟಕ್ಕೂ ಅಂಜದೆ ಅವುಗಳನ್ನು ಧೈರ್ಯದಿಂದ ಎದುರಿಸಿದರು. "ಶ್ರೀದುರ್ಗಾಮಾತೆ ಶಕ್ತಿದಾತೆ; ಆಕೆ ದುರ್ಗತಿನಾಶಿನಿ" ಎಂದು ಅವಳ ಗುಣಗಾನ ಮಾಡುತ್ತ ತುಲಸಿ ಮಾನಸ ಮಂದಿರಕ್ಕೆ ಬಂದೆವು.

ಎರಡಂತಸ್ತಿನ ಈ 'ತುಲಸಿ ಮಾನಸ ಮಂದಿರ'ವು ಅಂಥ ಪ್ರಾಚೀನ ಮಂದಿರವೇನಲ್ಲ. ರಾಮ–ಲಕ್ಷ್ಮಣ–ಸೀತೆಯರ ಅಮೃತ ಶಿಲಾಮೂರ್ತಿಗಳನ್ನು ಇಟ್ಟಿರುವ ಈ ದೇವಸ್ಥಾನದ ವಿಶೇಷತೆಯೆಂದರೆ ಸಂತ ತುಲಸೀದಾಸರ 'ಶ್ರೀರಾಮಚರಿತ ಮಾನಸ' ಕಾವ್ಯವನ್ನು ಸಂಪೂರ್ಣವಾಗಿ ಗೋಡೆಗಳ ಮೇಲೆ ಕೆತ್ತಿರುವುದು. ಮೇಲಂತಸ್ತಿನಲ್ಲಿ ರಾಮಾಯಣ ಹಾಗೂ ಶ್ರೀಕೃಷ್ಣಲೀಲೆಗಳ ಗೊಂಬೆಗಳ ಪ್ರದರ್ಶನವಿದೆ. ಶ್ರಾವಣ ಮೇಳದ ಅಂಗವಾಗಿ ಇಂಥ ಗೊಂಬೆಗಳ ಪ್ರದರ್ಶನವನ್ನು ಹೊರಾಂಗಣದಲ್ಲೂ ಏರ್ಪಡಿಸಲಾಗಿದ್ದು, ಅದು ಆಬಾಲವೃದ್ಧರ ಮನಸೆಳೆಯುತ್ತದೆ.

*(ಮುಂದುವರಿಯುವುದು)*